ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ ,
**ನಾಗಮಂಗಲ.**

**ಸಿ.ಸಿ. ನಂ** 414/2022

**ಪಿರ್ಯಾದಿಃ-** ನಾಗಮಂಗಲ ಪಟ್ಟಣ ಪೊಲೀಸ್ ಠಾಣೆ

**ವಿರುದ್ಧ –**

**ಆರೋಪಿಃ-**
1. ಕೆಂಪೇಗೌಡ
2. ರಾಧಮಣಿ
3. ರುದ್ರೇಶ

**ಃ <u>ದೋಷಾರೋಪಣೆ</u> ಃ**

ಶ್ರೀ ದೀಪಕ್ ಪಾಟೀಲ್, ಬಿ.ಎಸ್.ಸಿ.ಎಲ್,ಎಲ್.ಬಿ., ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ನಾಗಮಂಗಲ ಆದ ನಾನು

1. ಕೆಂಪೇಗೌಡ ಬಿನ್ ಬಸವೇಗೌಡ 53 ವರ್ಷ,
2. ರಾಧಮಣಿ ಕೋಂ ಕೆಂಪೇಗೌಡ , 45 ವರ್ಷ,
3. ರುದ್ರೇಶ ಬಿನ್ ಕೆಂಪೇಗೌಡ , 25 ವರ್ಷ
   ಎಲ್ಲರು ವಾಸಃ ಹುಲ್ಲೇಕೆರೆ ಗ್ರಾಮ, ಕಸಬಾ ಹೋಬಳಿ, ನಾಗಮಂಗಲ

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ ಃ

ದಿನಾಂಕಃ 26.08.2021 ರಂದು ಮಧ್ಯಾಹ್ನ 12.30 ಗಂಟೆಯ ಸಮಯದಲ್ಲಿ ನಾಗಮಂಗಲ ಟೌನ್ ಪೊಲೀಸ್ ಠಾಣಾ ಸರಹದ್ದಿನ ಹುಲ್ಲೇಕೆರೆ ಗ್ರಾಮದಲ್ಲಿ ಚಾಸಾ.1 ರಿಂದ 3 ರವರು ತಮ್ಮ ಮನೆಯಲ್ಲಿ ಇದ್ದಾಗ 1 ರಿಂದ 3 ನೇ ಆರೋಪಿತರಾದ ನೀವು ಸಾಕ್ಷಿ 1 ರವರ ಮನೆಯ ಹತ್ತಿರ ಬಂದು 2 ನೇ ಆರೋಪಿಯಾದ ನೀವು ಸಾಕ್ಷಿ 1 ರವರ ಮನೆಯ ಮುಂದೆ ನಿಂತು ಯಾರು ಸೂಳೆ ಮಕ್ಕಳು, ಬೇರ್ವಸಿ ಮುಂಡೆವು ಬಾತ್ರೂಮ್ ಕೆಡವಿದ್ದಾರೆಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಸಾಕ್ಷಿ 1 ರವರು ಮನೆಯೊಳಗೆ ನಿಂತು ಅದು ಮಳೆಗೆ ಬಿದ್ದು ಹೋಗಿದೆ ಏಕೆ ಈ ರೀತಿ ಬೈಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ 1 ಮತ್ತು 2 ನೇ ಆರೋಪಿತರಾದ ನೀವು ಸಾಕ್ಷಿ 1 ರವರನ್ನು ಉದ್ದೇಶಿಸಿ ಏನೆ ಲೋಫರ್ ಎಂದು ಅವಾಚ್ಯ ಶಬ್ದಗಳಿಂದ ಬೈದು ಭಾರತೀಯ ದಂಡ ಸಂಹಿತೆ ಕಲಂ 504

ಸಹವಾಚಕ ಕಲಂ 34 **ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.**

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶ ಮುಂದುವರಿಸಿ 1ನೇ ಆರೋಪಿಯಾದ ನೀವು ಸಾಕ್ಷಿ 1 ರವರ ಮನೆಯೊಳಗೆ ಅಕ್ರಮ ಪ್ರವೇಶ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ ಕಲಂ 34 **ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.**

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶ ಮುಂದುವರಿಸಿ 1ನೇ ಆರೋಪಿಯಾದ ನೀವು ಸಾಕ್ಷಿ 1 ರವರ ಮನೆಯೊಳಗೆ ಅಕ್ರಮವಾಗಿ ಪ್ರವೇಶಿಸಿ , ಸಾಕ್ಷಿ 1ರವರ ಮುಂದಲೆ ಹಿಡಿದು ಹೊರಕ್ಕೆ ಎಳೆದುಕೊಂಡು ಬಂದು ಕೈಯಿಂದ ತಲೆಯ ಮೇಲೆ ಹೊಡೆದು ಸಾಕ್ಷಿ 1 ರವರ ಸೀರೆಯನ್ನು ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಅವಮಾನ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ ಕಲಂ 34 **ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.**

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶ ಮುಂದುವರಿಸಿ 1ನೇ ಆರೋಪಿಯದ ನೀವು ಸಾಕ್ಷಿ 1ರವರ ತಲೆಯ ಮೇಲೆ ಹೊಡೆದು, ಗಲಾಟೆ ಬಿಡಿಸಲು ಬಂದ ಸಾಕ್ಷಿ 02ರವರಿಗೆ ಕಾಲಿನಿಂದ ಒದ್ದು ಕೆಳಕ್ಕೆ ಬೀಳಿಸಿರುತ್ತೀರಿ, 3ನೇ ಆರೋಪಿಯಾದ ನೀವು ಸಾಕ್ಷಿ 03ರವರ ಕುತ್ತಿಗೆ ಪಟ್ಟಿ ಹಿಡಿದು ಕೆಳಕ್ಕೆ ಬೀಳಿಸಿ ಕಾಲಿನಿಂದ ಮೈ ಮೇಲೆ ಒದ್ದು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 **ರ ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.**

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶ ಮುಂದುವರಿಸಿ 2ನೇ ಆರೋಪಿಯಾದ ನೀವು ಇವರನ್ನು ಬಿಡಬೇಡಿ ಎಂದು 1 ಮತ್ತು 3ನೇ ಆರೋಪಿತರಿಗೆ ಕುಮ್ಮಕ್ಕು ಕೊಟ್ಟು ಭಾರತೀಯ ದಂಡ ಸಂಹಿತೆ ಕಲಂ 114

ಸಹವಾಚಕ ಕಲಂ 34 ರ **ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.**

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶ ಮುಂದುವರಿಸಿ ಸಾಕ್ಷಿ 1 ರಿಂದ 3 ರವರಿಗೆ ಪ್ರಾಣ ಬೆದರಿಕೆ ಹಾಕಿ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ **ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.**

ಪ್ರಃ ನಿಮಗೆ ಮೇಲೆ ತಿಳಿಸಿದ ಆರೋಪಣೆಯ ಎಲ್ಲಾ ಸಾರಾಂಶ ತಿಳಿಯಿತೆ?

ಉಃ

ಪ್ರಃ ನೀವು ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರಾ?

ಉಃ

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ತೆರದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

**ಸ್ಥಳಃ ನಾಗಮಂಗಲ,** (ದೀಪಕ್ ಪಾಟೀಲ್)
**ದಿನಾಂಕಃ** 22-08-2023 **ಹಿರಿಯ ಸಿವಿಲ್ ನ್ಯಾಯಾಧೀಶರು & ಜೆಎಂಎಫ್‌ಸಿ**
**ನಾಗಮಂಗಲ**

ಆರೋಪಿ 1ಃ

ಆರೋಪಿ 2ಃ

ಆರೋಪಿ 2ಃ